ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday, 1st April 1970.

The House met in the Assembly Chamber, Vidhana Soudha, Bangalore, at One of the Clock.

Mr. SPEAKER (Sri S. D. Kothauale) in the Chair.

STARRED QUESTIONS

(to which oral answers were given):

POSTING OF A LADY DOCTOR AT DODDAHEJJAJI COMBINED HOSPITAL

499: Sri G. RAME GOWDA (Doddaballapur):—

Will the Minister for Health be pleasd to state :—

(*a*) when the Combined Hospital at Doddahejjaji was started ;

(*b*) when a lady doctor was posted and how long she worked there;

(*c*) the reasons for transfering the lady doctor within two months

(*d*) the arrangement made to post a lady doctor ?

Sri G. BASAVANNAPPA (Deputy Minister for Health).—

(*a*) On 24th February 1968.

(*b*) On 6th August 1969. She worked there for two months. ?

(*c*) She has been transferred at her request.

(*d*) One lady candidate by name Dr. Smt. J. Nirmala has been posted on 24th November 1969 and she has not yet reported for duty.

ಶ್ರೀ ಜಿ. ರಾಮೇಗೌಡ.—ಈ ಆಸ್ಪತ್ರೆಯಲ್ಲಿ ತಾವು ಎಷ್ಟೋ ದಿವಸಗಳಿಂದ ಮಹಿಳಾ ಡಾಕ್ಟರ್ ಇಲ್ಲವೆಂದು ಹೇಳಿದ್ದೀರಿ, ಆ ಸಮಯದಲ್ಲಿ ಆ ಆಸ್ಪತ್ರೆಯಲ್ಲಿ ಹೇಗೆ ಕೆಲಸ ನಡೆಯುತ್ತಿತ್ತು.

†ಶ್ರೀ ಜಿ. ಬಸವಣ್ಣಪ್ಪ.—ಅಲ್ಲಿ ಒನೇ ಆಗಸ್ಟ್ ೧೯೬೯ರಂದು ಒಬ್ಬ ಲೇಡಿ ಡಾಕ್ಟರ್ ವಿ. ಶಾರದಮ್ಮ ಎಂಬುವರನ್ನು ಪೋಸ್ಟ್ ಮಾಡಿತ್ತು. ಅವರು ಅಲ್ಲಿ ಕ್ವಾರ್ಟರ್ಸ್ ಸೌಕರ್ಯ ಇಲ್ಲ, ಮತ್ತು ಇತರ ಸೌಲಭ್ಯ ವಿಲ್ಲ ಕಷ್ಟವಾಗುತ್ತದೆಂದು ಹೇಳಿ, ಟ್ರಾನ್ಸ್‌ಫರ್ ಬೇಕೆಂದು ಕೇಳಿದ ಪ್ರಕಾರ ಅವರನ್ನು ಅಲ್ಲಿಂದ ಟ್ರಾನ್ ಫರ್ ಮಾಡಲಾಯಿತು. ಅಲ್ಲಿಂದ ಮೇಲೆ ಅಲ್ಲಿ ಲೇಡಿ ಡಾಕ್ಟರು ಇರಲಿಲ್ಲ.

ಶ್ರೀ ಜಿ. ರಾಮೇಗೌಡ.—ಕಾನೂನು ಪ್ರಕಾರ ಎರಡು ವರ್ಷಗಳ ಮೊದಲು ಯಾವ ಡಾಕ್ಟರನ್ನೂ ಬದಲಾವಣೆ ಮಾಡಬಾರದು ಎಂದು ಇದೆ ಆದರೆ ಇಲ್ಲಿ ಎರಡು ತಿಂಗಳ ಒಳಗೆ ಬದಲಾವಣೆ ಮಾಡುವುದಕ್ಕೆ ಅವರು ಮಂತ್ರಿಯವರ ಹತ್ತಿರ ಉಪಯೋಗಿಸಿದ ಪ್ರಭಾವವೇನು ?

ಶ್ರೀ ಜಿ. ಬಸವಣ್ಣಪ್ಪ.—ಎರಡು ವರ್ಷದೊಳಗೆ ಟ್ರಾನ್ಸ್‌ಫರ್ ಮಾಡಬಾರದು ಎಂದು ಸರ್ಕಾರದ ಉದ್ದೇಶ ಇದೆ. ಆದರೆ ಲೇಡಿ ಡಾಕ್ಟರಿಗೆ ಯಾವ ಸೌಲಭ್ಯವೂ ಇಲ್ಲದಿರುವುದರಿಂದ ಹಾಗೆ ಅವರು ಮನವಿ ಮಾಡಿಕೊಂಡಿರುವರು ಮತ್ತು ಅದರಂತೆ ವರ್ಗಾವಣೆ ಮಾಡಲಾಯಿತು. ಈಗ ಅಲ್ಲಿಗೆ ಜೆ. ನಿರ್ಮಲ ಎಂಬ ಡಾಕ್ಟರನ್ನು ಪೋಸ್ಟ್ ಮಾಡಲಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.— ಈ ನಿರ್ಮಲಾ ಎನ್ನತಕ್ಕವರು ಹೊಸದಾಗಿ ನೇಮಕಗೊಂಡವರೇ, ಅಥವಾ ಬೇರೆ ಕಡೆಯಿಂದ ಟ್ರಾನ್ಸ್‌ಫರ್ ಮಾಡಲ್ಪಟ್ಟವರೇ ?

ಶ್ರೀ ಜಿ. ಬಸವಣ್ಣಪ್ಪ.—ಅವರನ್ನು ಹೊಸದಾಗಿ ನೇಮಕ ಮಾಡಲಾಗಿದೆ. ಅವರನ್ನು ಅಲ್ಲಿಗೆ ಪೋಸ್ಟು ಮಾಡಲಾಗಿದೆ, ಆದರೆ ಅವರು ರಿಪೋರ್ಟು ಮಾಡಿಕೊಂಡಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಈ ದೊಡ್ಡಹೆಜ್ಜಾಜಿ ಆಸ್ಪತ್ರೆಯಲ್ಲಿ ಮಹಿಳಾ ಡಾಕ್ಟರ್ ಕೆಲಸ ಮಾಡುತ್ತಾ ಇಲ್ಲ. ಇದೇ ತರ ರಾಜ್ಯದಲ್ಲಿ ಅನೇಕ ಆಸ್ಪತ್ರೆಗಳಲ್ಲಿ ಮಾಹಿಳಾ ಡಾಕ್ಟರು ಇಲ್ಲದಿರತಕ್ಕದ್ದು ವಿಶೇಷವಾಗಿದೆ ಆದ್ದರಿಂದ ಮಹಿಳಾ ವೈದ್ಯರು ಹಳ್ಳಿಗಳ ಆಸ್ಪತ್ರೆಗಳಲ್ಲಿ ಕೆಲಸಮಾಡ ತಕ್ಕಂತಹ ಅಟ್ರಾಕ್ಟಿವ್ ಸ್ಕೀಂ ಏನಾದರೂ ಮಾಡಿದ್ದೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ೩೧೦ ಲೇಡಿ ಡಾಕ್ಟರುಗಳ ಪೋಸ್ಟು ವೇಕೆಂಟ್ ಇದೆ. ಆದರ ಬಗ್ಗೆ ರೂರಲ್ ಏರಿಯಾದಲ್ಲಿ ಲೇಡಿ ಡಾಕ್ಟರ್ಸ್ ಮತ್ತು ಇತರ ಡಾಕ್ಟರ್ಸ್ ಕೆಲಸ ಮಾಡುವುದಕ್ಕೆ ಒಂದುಟ್ಟಿರೂರಲ್ ಅಲೋಯೆನ್ಸ್ ಕೊಡುವುದಕ್ಕೆ ವ್ಯವಸೆ ಮಾಡಿದ್ದೇವೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಕ್ವಾರ್ಟರ್ಸ್ ಇಲ್ಲದಿರುವುದರಿಂದ ಮುಂಚಿನ ಡಾಕ್ಟರ್ ವರ್ಗ ಮಾಡಿಕೊಂಡು ಹೋಗಿದ್ದಾರೆಂದು ಹೇಳಿದ್ದೀರಿ. ಈಗ ಹೊಸದಾಗಿ ನೇಮಕವಾದಂತಹ ಡಾಕ್ಟರಿಗೆ ಅದೇ ರೀತಿಯ ಕ್ವಾರ್ಟರ್ಸ್ ತೊಂದರೆ ಇಲ್ಲವೇ ?

ಶ್ರೀ ಜಿ. ಬಸವಣ್ಣಪ್ಪ.—ಈಗ ಕ್ವಾರ್ಟರ್ಸ್ ಬಗ್ಗೆ ಅಲ್ಲಿ ಸ್ಥಳೀಯ ಮುಖ್ಯಸ್ಥರು ಏನಾದರೂ ವ್ಯವಸ್ಥೆ ಮಾಡಲು ಮುಂದೆ ಬಂದರೆ ಅನುಕೂಲವಾಗುತ್ತದೆ. ಮೊದಲು ಯಾವ ವ್ಯವಸ್ಥೆಯೂ ಇಲ್ಲ ದಿರುವುದರಿಂದ ಲೇಡಿ ಡಾಕ್ಟರು ನಿಲ್ಲಲಿಲ್ಲ.

Asterisks indicate that remarks or speeches have not been revised by the member concerned.

ಶ್ರೀ ಎ ಆರ್. ಒದರೀನಾರಾಯಣ್:—ಸಾಮಾನ್ಯವಾಗಿ ಹಳ್ಳಿಯ ಪ್ರದೇಶಗಳಲ್ಲಿ ಕ್ವಾರ್ಟರ್ಸ್ ಫ್ಯಾಸಿಲಿಟಿ ಇಲ್ಲದೇ ಇರುವುದರಿಂದ ಹೆಂಗಸರು ಡಾಕ್ಟರುಗಳು ಬಾರದೇ ಇರುವುದರಿಂದ ಅದಕ್ಕೆ ಯಾವ್ಯಾವ ವ್ಯವಸ್ಥೆಗಳನ್ನು ಮಾಡುವುದಕ್ಕೆ ಏರ್ಪಾಡು ಮಾಡಿದ್ದೀರಿ?

ಶ್ರೀ ಜಿ. ಬಸವಣ್ಣಪ್ಪ:—ಅದರ ಬಗ್ಗೆ ಸರ್ಕಾರ ತೀವ್ರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿರುವವರು ಲೇಡಿ ಡಾಕ್ಟರುಗಳಿಗೆ ಮತ್ತು ಡಾಕ್ಟರುಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ.

ಶ್ರೀ ಎಂ. ನಾಗಪ್ಪ:—ಲೇಡಿ ಡಾಕ್ಟರನ್ನು ಎರಡು ತಿಂಗಳುಗಳಲ್ಲಿ ವರ್ಗಮಾಡಿದೆ ಎಂಬುದಾಗಿ ಹೇಳಿದಿರಿ. ಸರ್ಕಾರದವರು ಲೇಡಿ ಡಾಕ್ಟರುಗಳಿಗೆ ಸೌಲಭ್ಯ ಹೆಚ್ಚಿ ಗೆ ನೀಡುತ್ತಾರೋ ಅಥವಾ ಜನತೆಗೆ ಸೌಲಭ್ಯಗಳನ್ನು ಹೆಚ್ಚಿಗೆ ನೀಡುತ್ತಾರೋ? ಡಾಕ್ಟರು ಇಲ್ಲದಬಹಳ ಕಷ್ಟವಾಗಿದೆ. ಆದ್ದರಿಂದ ಸರ್ಕಾರದವರು ಜನರಿಗೆ ಸೌಲಭ್ಯ ಕೊಡಲು ತಕ್ಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ:—ಸರ್ಕಾರ ಜನತೆಗೆ ಸೌಕರ್ಯ ನೀಡಬೇಕೆಂಬುದೇ ಮೂಲ ಉದ್ದೇಶ. ಅಲ್ಲಿನ ಜನಗಳು ಮುಂದೆ ಬಂದರೆ ಡಾಕ್ಟರುಗಳಿಗೆ ಹೆಚ್ಚಿಗೆ ಅನುಕೂಲವಾಗುತ್ತದೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್:—ಆ ಲೇಡಿ ಡಾಕ್ಟರನ್ನು ಟ್ರಾನ್ಸ್‌ಫರ್ ಮಾಡುವಾಗ ಅವರು ಅಲ್ಲಿಯೇ ಇರುತ್ತೇನೆಂದು ತಮಗೆ ಪತ್ರ ಬರದಿದ್ದರೂ ಅವರನ್ನು ಯಾವುದೋ ಒಂದು ರಾಜಕೀಯ ಒತ್ತಾಯದಿಂದ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿದ್ದು ನಿಜವೇ?

ಶ್ರೀ ಜಿ. ಬಸವಣ್ಣಪ್ಪ:—ಇದರಲ್ಲಿ ಯಾವ ರಾಜಕೀಯ ಒತ್ತಾಯವೂ ಇಲ್ಲ.

ಶ್ರೀ ದೊಡ್ಡಬೋರೇಗೌಡ:—ಆ ಡಾಕ್ಟರನ್ನು ಅವರ ಕೋರಿಕೆ ಮೇರೆಗೆ ವರ್ಗ ಮಾಡಿದೆಯೆಂದು ಹೇಳಿದ್ದೀರಿ. ಹಾಗಿದ್ದರೆ ಈ ರಾಜ್ಯದಲ್ಲಿ ಇನ್ನುಮುಂದೆ ಮಹಿಳಾ ಡಾಕ್ಟರುಗಳು ಅವರಿಗೆ ಬೇಕಾದಂಥ ಸ್ಥಳಗಳನ್ನು ಕೇಳಿದರೆ, ಇದೇ ರೀತಿಯಲ್ಲಿ ಆ ಸೌಲಭ್ಯವನ್ನು ಒದಗಿಸಿಕೊಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ:—ಹಾಗಾಗುವುದಿಲ್ಲ. ಅದನ್ನು ಅನೇಕ ರೀತಿಯಲ್ಲಿ ವಿಚಾರ ಮಾಡಿ ತೀರ್ಮಾನಮಾಡಲಾಗಿದೆ.

ಶ್ರೀ ಎಸ್. ಬಂಗಾರಪ್ಪ:—೨೪ನೇ ನವೆಂಬರ್ ೧೯೬೯ರಂದು ಡಾ. ಜಿ. ನಿರ್ಮಲ ಅವರನ್ನು ಅಲ್ಲಿಗೆ ನೇಮಿಸಿದ್ದೀರಿ. ಅವರು ಕೆಲಸಕ್ಕೆ ಹಾಜರಾಗಲಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಅವರು ರಜದಮೇಲೆ ಇದ್ದರೆ, ಅವರು ಕೆಲಸಕ್ಕೆ ಹಾಜರಾಗದೇ ಇದ್ದರೆ, ಈ ಕಾನೂನು ಪ್ರಕಾರ ಅವರ ಮೇಲೆ ಕ್ರಮ ಕೈಕೊಳ್ಳುವುದಕ್ಕೆ ಸಾಧ್ಯವಿದೆಯೇ?

ಶ್ರೀ ಜಿ. ಬಸವಣ ಪ್ಪ:—ಕ್ರಮ ತೆಗೆದುಕೊಂಡಿದ್ದರಿಂದ ಇಲ್ಲಿಯವರೆಗೂ ಅವರಿಗೆ ಯಾವ ಹುದ್ದೆಯಮ್ಮೂ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಪ್ಪ:—ವಸತಿ ಸೌಕರ್ಯಗಳು ಇಲ್ಲದೇ ಇರುವುದರಿಂದ ಡಾಕ್ಟರುಗಳು ಗ್ರಾಮಾಂತರ ಪ್ರದೇಶಗಳಿಗೆ ಹೋಗುತ್ತಾ ಇಲ್ಲ. ಆದ್ದರಿಂದ ಪ್ರಸೂತಿ ಗೃಹಗಳನ್ನು ಕಟ್ಟುವುದಕ್ಕೆ ಮುಂಚೆ ವಸತಿ ಗೃಹಗಳನ್ನು ಕಟ್ಟಿಸಿ ಆನಂತರ ಆಸ್ಪತ್ರೆಗಳನ್ನು ಮಂಜೂರು ಮಾಡಿದರೆ ಒಳ್ಳೆಯದಾಗಿರುತ್ತದೆ. ಆದ್ದರಿಂದ ಮೊದಲು ವಸತಿ ಗೃಹಗಳನ್ನು ಕಟ್ಟಿಸುತ್ತೀರಾ?

ಶ್ರೀ ಜಿ.ಬಸವಣ್ಣಪ್ಪ:—ವಸತಿ ಗೃಹಗಳನ್ನು ಕಟ್ಟುವುದಕ್ಕೆ ಮುಂಚೆ ಪ್ರಸೂತಿ ಗೃಹಗಳನ್ನು ಕಟ್ಟಿಸುವ ಅವಶ್ಯಕತೆ ಬಹಳ ಜಾಸ್ತಿ ಇದೆ. ಅದಕ್ಕೋಸ್ಕರ ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ರಾಮೇಗೌಡ:—ಈ ವರ್ಗಾವಣೆಯನ್ನು ಆರೋಗ್ಯ ಖಾತೆಯ ಮಂತ್ರಿಗಳು ಮಾಡಿದ್ದಾರೋ ಅಥವಾ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೋ?

ಶ್ರೀ ಜಿ. ಬಸವಣ್ಣಪ್ಪ:—ಅದನ್ನು ಆರೋಗ್ಯಮಂತ್ರಿಗಳು ಮಾಡಿದ್ದು.